ನಡುಬಾಡೆ ಇ-ಪತ್ರಿಕೆ

ASDCA No;SCAB13122025/5632149 UDYAM-KR-18-0022072 ಕೊಡಗಿನ ಪ್ರಥಮ ದ್ವಿಭಾಷ ಸಂಜೆ ಇ-ದೈನಿಕ

ಸಂಪುಟ:01 ಸಂಚಿಕೆ: 51 ದಿನಾಂಕ: 28/11/26, ಶನಿವಾರ 8951073556 ನಾಳಂಕೆ : ಬಿರ್ಚ್ಯಾರ್ - 13, ಚೆನಿಯಾಚೆ

www.nadubadenews.com ಸಂಪಾದಕ: ಚಾಮೆರ ದಿನೇಶ್‌ಬೆಳ್ಯಪ್ಪ nadubadenews@gmail.com @nadubadenews ಪುಟ: 1

ಲೋಕಸಭಾ ಕ್ಷೇತ್ರ ಪುನರ್ ವಿಂಗಡಣೆಗೆ ಮುಹೂರ್ತ ಪಕ್ಕ, ಈ ಭಾರಿಯಾದರೂ ಕೊಡಗು ಆಗುತ್ತಾ ಪ್ರತ್ಯೇಕ...

ದೇಶದಲ್ಲಿ ಲೋಕಸಭಾ ಕ್ಷೇತ್ರ ಪುನರ್ ವಿಂಗಡಣಾ ಕಾರ್ಯಕ್ಕೆ ಸರ್ಕಾರ ಮತ್ತೊಮ್ಮೆ ತಯಾರಿ ನಡೆಸುತಿದ್ದು, ಇದರಿಂದ ಲೋಕ ಸಭಾ ಕಷೇತ್ರಗಳ ಸಂಖ್ಯೆಯು ಪ್ರಸ್ತುತ ಇರುವ 543ರಿಂದ 834ಕ್ಕೇ ಏರಿಕೆ ಆಗುವ ನಿರೀಕ್ಷೆಯಿದ್ದು, ಸೋಮಾರದಿಂದ ಆರಂಭ ವಾಗುವ ಸಂಸತ್ ಅಧಿವೇಷನದಲ್ಲಿ ಈ ಮಸೂದೆ ಮಂಡನೆಯಾಗುವ ಸಾದ್ಯತೆ ಇದ್ದು, ಸರ್ಕಾರ ಈ ಹಿಂಣಧೇ ಖೋಢಷೂ ಖುಆಜ್ಯವನ್ನು ಕೂಡಾವಳಿ ಮಾಡುವಾಗ ಕೊಟ್ಟ ಭರಸೆಯಣತೆ ಈಗಲಾದರೂ ಕೊಡಗನ್ನು ಪ್ರತ್ಯೇಕ ಲೋಕಸಭಾ ಸ್ಥಾನಕ್ಕೆ ಪರಿಗಣಿಸುತ್ತದಾ ಇಲ್ಲ, ಮತ್ತೊಮ್ಮೆ ಇತರ ಪ್ರದೇಶದೊಂದಿಗೇ ಹಂಚಿಬಿಡುತ್ತದಾ ಎಂಬ ಆತಂಕ ಮನೆ ಮಾಡಿದೆ. ಆದರೂ ಸರ್ಕಾರ ಸಾಮಾಜಿಕ ಮತ್ತು ಪ್ರಾದೇಶಿಕ ಹಿನ್ನಲೆಯನ್ನು ಪರಿಗಣಿಸಿ ಕೊಡಗನ್ನು ಪ್ರತ್ಯೇಕ ಲೋಕಸಭಾ ಕ್ಷೇತ್ರವಾಗಿ ಪರಿಗಣೀಸಬೇಕು ಎನ್ನೋ ಆಗ್ರಹಗಳು ದಶಕಗಳಿಂದಲೂ ಇದ್ದು, ಪ್ರಸ್ತುತ ಸನ್ನಿವೇಶದಲ್ಲಿ ಮತ್ತಷ್ಟು ಒತ್ತಡ ಹಾಕು ಅನಿವಾರ್ಯತೆಗೆ ಸಿದ್ದತೆ ಮಾಡಬೇಕಿದೆ. ಹಿಂದೆ ಮಂಗಳೂರಿನೊಂದಿಗೆ ಜೋಡಣೆ ಯಾಗಿದ್ದ ಕೊಡಗು, ಪ್ರಸ್ತುತ ಮೈಸೂರಿನೊಂದಿಗೆ ಕ್ಷೇತ್ರ ಹಂಚಿಕೊಂಡಿದೆ. ಜನಸಂಖ್ಯೆಯಲ್ಲಿ ಇತರ ಕ್ಷೇತ್ರಗಳಿಗೆ ಕೊಡಗು ಸರಿ ಸಮವಾಗಿಲ್ಲವಾದರೂ, ಬೌಗೋಳಿಕವಾಗಿ, ಪ್ರಾದೇಶುಕವಾಗಿ, ಹಾಗೂ ಸಾಂಸ್ಕೃತಿಕವಾಗಿಯೂ ವಿಭಿನ್ನವಾಗಿರುವ ಕ್ಷೇತ್ರವಾಗಲಿದೆ. ರಾಷ್ಟ್ರಮಟ್ಟದಲ್ಲಿ ಕೊಡಗಿನ ಕಾಫಿ ಬೆಳೆಗಾರರ ಸಂಕಷ್ಟ, ಮಾನವ-ವನ್ಯಜೀವಿ ಸಂಘರ್ಷ, ಪರಿಸರ ಸೂಕ್ಷ್ಮ ವಲಯದ (ESZ) ಸಮಸ್ಯೆಗಳು ಮತ್ತು ಮೂಲಸೌಕರ್ಯಕ್ಕೆ ನೇರ ಪ್ರತಿನಿಧಿಯ ಅನಿವಾರ್ಯತೆ ಇದ್ದು, ಜಿಲ್ಲೆಯ ರಾಜಕೀಯ ಪಕ್ಷಗಳು ಮತ್ತು ನಾಗರೀಕರನ್ನೊಳಗೊಂಡಂತೆ ಸಮಗ್ರ ಸಂಘಟಿತ ಜನಾಂದೋಲನ ರೂಪಿಸಿ ಸರ್ಕಾರದ ಮೇಲೆ ಒತ್ತಡ ತರುವ ಮೂಲಕ ಕೊಡಗಿನ ಅಸ್ಮಿತೆಯ ಅನಿವಾರ್ಯತೆಯನ್ನು ಸಾಬೀತು ಪಡಿಸಬೇಕಿದೆ.

ಕ್ಷೇತ್ರ ಪುನರ್‌ವಿಂಣಗಡಣಾ ಹಂತವನ್ನು ಕೇವಲ ಜನಸಂಖ್ಯೆಯ ಆಧಾರದಲ್ಲಿ ನೋಡದೆ,

ಈಗಾಗಲೇ ಈಶಾನ್ಯ ಭಾರತದ ಗುಡ್ಡಗಾಡು ರಾಜ್ಯಗಳಾದ ಸಿಕ್ಕಿಂ, ಮಿಜೋರಾಂ, ನಾಗಾಲ್ಯಾಂಡ್ ಮತ್ತು ಅರುಣಾಚಲ ಪ್ರದೇಶಗಳಲ್ಲಿ ಜನಸಂಖ್ಯೆ ಕಡಿಮೆಯಿದ್ದರೂ, ಅಲ್ಲಿನ ಭೌಗೋಳಿಕ ಪರಿಸ್ಥಿತಿ ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಲು ಪ್ರತ್ಯೇಕ ಲೋಕಸಭಾ ಕ್ಷೇತ್ರಗಳನ್ನು ನೀಡಲಾಗಿರುವದನ್ನು ಪರಿಗಣೀಸಿ, ಪಶ್ಚಿಮ ಘಟ್ಟದ ಸೂಕ್ಷ್ಮ ಪರಿಸರ, ವಿಶಿಷ್ಟ ಬುಡಕಟ್ಟು ಸಂಸ್ಕೃತಿಯನ್ನು ಹೊಂದಿರುವ ಕೊಡಗಿಗೂ ಇದೇ ಮಾದರಿಯಲ್ಲಿ ವಿಶೇಷ ನೀತಿ ನಿರೂಪಣೆ ಅಥವಾ ಸಾಂವಿಧಾನಿಕ ತಿದ್ದುಪಡಿಯ ಮೂಲಕ ಪ್ರತ್ಯೇಕ ಕ್ಷೇತ್ರದ ಸ್ಥಾನಮಾನ ನೀಡುವತ್ತ ನಿರಂತರ ಒತ್ತಡದ ಅನಿವಾರ್ಯತೆ ಇದೆ.



ಕೊಡಗು ಪ್ರತ್ಯೇಕ ಲೋಕಸಭಾ ಕ್ಷೇತ್ರವಾಗಬೇಕು ಎಂಬುದು ಎಲ್ಲರ ನಿರೀಕ್ಷೆಯಾಗಿದೆ. ಈ ನಿಟ್ಟಿನಲ್ಲಿ ಸಂಸದರ ಮೂಲಕ ಹಾಗೂ ಪಕ್ಷದ ವತಿಯಿಂದಲೂ ಮನವಿಯ ಮೂಲಕ ಒತ್ತಡ ತರಲಾಗುತಿದ್ದು, ಈ ಭಾರಿ ಪ್ರಾದೇಶಿಕ ಆಧಾರದಲ್ಲಿ ಕೊಡಗು ಲೋಕಸಭಾ ಕ್ಷೇತ್ರ ನಿಗಧೀಯಾಗುವ ಭರವಸೆ ಇದೆ

-ನಾಪಂಡ ರವಿ ಕಾಳಪ್ಪ
ಜಿಲ್ಲಾಧ್ಯಕ್ಷರು
ಬಿಜೆಪಿ.



ಪ್ರತ್ಯೇಕ ಲೋಕಸಭಾ ಕ್ಷೇತ್ರ ನಮ್ಮ ಹಕ್ಕು , ಇದಕ್ಕಾಗಿ ನಾವು ಪಕ್ಷಾತೀತ ಹೋರಾಟವನ್ನು ರೂಪಿಸಬೇಕಿದೆ. ನಾವೂ ಕೂಡ ಶಾಸಕರ ಮೂಲಕ ರಾಜ್ಯಸರ್ಕಾರದಿಂದ ಕೇಂದ್ರಕ್ಕೆ ಒತ್ತಡ ಹಾಕುವ ಕೆಲಸವನ್ನು ಮಾಡಲಿದ್ದೇವೆ. ಮತ್ತು ಈ ನಿಟ್ಟಿನ ಹೋರಾಟಕ್ಕೂ ಮುಂಚುಣಿಯಲ್ಲಿ ನಿಲ್ಲಲಿದ್ದೇವೆ

- ತೀತಿರ ದರ್ಮಜ ಉತ್ತಪ್ಪ
ಅಧ್ಯಕ್ಷರು
ಕೊಡಗು ಜಿಲ್ಲಾ ಕಾಂಗ್ರೆಸ್



ಕೊಡಗು ಪ್ರತತ್ಯೇಕ ಲೋಕ ಸಭಾ ಕ್ಷೇತ್ರವಾದರೇನೇ ನಮ್ಮ ಅಸ್ಮಿತೆಯನ್ನು ಕಾಪಾಡಿಕೊಳ್ಳಲು ಸಾಧ್ಯ. ಇದಕ್ಕಾಗಿ ಒಕ್ಕೋರಲ ಸಂಘಟಿತ ಒತ್ತಡ ಅನಿವಾರ್ಯತೆಯಿದ್ದು, ನಾವು ಸಂಪೂರ್ಣ ಹೊಣೆಗಾರಿಕೆಯಿಂದ ಕೈ ಜೋಡಿಸುತ್ತೇವೆ.

- ಹೆಚ್.ಡಿ. ಪ್ರವೀಣ್
ಜೆ.ಡಿ.ಎಸ್. ಜಿಲ್ಲಾಧ್ಯಕ್ಷರು



ಕುಶಾಲನಗರದಲ್ಲಿ ಜಿಲ್ಲಾಮಟ್ಟದ ಕನಕ ಭವನ ನಿರ್ಮಾಣ : ಶಾಸಕ ಡಾ.ಮಂತರ್ ಗೌಡ ಭರವಸೆ



@Nadubadenews; ನ.28; ಕುಶಾಲನಗರ: ತಾಲ್ಲೂಕು ಕೇಂದ್ರ ಕುಶಾಲನಗರದಲ್ಲಿ ಜಿಲ್ಲಾಮಟ್ಟದ ಕನಕ ಭವನ ನಿರ್ಮಾಣ ಮಾಡಲು ಅಗತ್ಯ ಅನುದಾನ ಒದಗಿಸಿಕೊಡಲು ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಡಾ.ಮಂತರ್ ಗೌಡ ಭರವಸೆ ನೀಡಿದರು.

ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸೋಮವಾರಪೇಟೆ ಪಟ್ಟಣ ಪಂಚಾಯಿತಿ, ಕುಶಾಲನಗರ ಪುರಸಭೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಇಲ್ಲಿನ ಕಲಾಭವನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ದಾಸ ಶ್ರೇಷ್ಠ ಶ್ರೀ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನಕ ಭವನ ನಿರ್ಮಾಣಕ್ಕೆ ಅಗತ್ಯ ಜಾಗದ ಗುರುತಿಸಲು ತಹಶೀಲ್ದಾರ್ ಅವರಿಗೆ ಸೂಚನೆ ನೀಡಿದ ಶಾಸಕರು, ಕನಕ ಭವನವನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದರು. ಅದೇ ರೀತಿ ಕಲಾಭವನದ ಉಳಿದ ಕಾಮಗಾರಿಗಾಗಿ ರೂ.1.40 ಕೋಟಿ ಬಿಡುಗಡೆಯಾಗಿದ್ದು, ಸಂಪೂರ್ಣ ಕಾಮಗಾರಿ ಮುಗಿಸಿ ಸುಸಜ್ಜಿತವಾದ ಕಲಾಭವನವಾಗಿ ರೂಪಿಸಲಾಗುತ್ತದೆ ಎಂದರು. ನಾಡಿನ ಮಹಾನ್ ಸಂತ ಕನಕದಾಸರು, ಕುಲ ಕುಲ ಕುಲವೆಂದು ಹೊಡೆದಾಡದಿರಿ ಎಂದು ತಮ್ಮ ಕೀರ್ತನೆಗಳ ಮೂಲಕ ಜನರಲ್ಲಿದ್ದ ಮೌಢ್ಯಗಳನ್ನ ಕಳೆಯಲು ಶ್ರಮಿಸಿದರು. ಪ್ರತಿಯೊಬ್ಬರೂ ಕನಕದಾಸರ ಚಿಂತನೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಜಾತಿ, ಮತದ ಬೇಧ ಬಾವ ತೊರೆದು ಆರೋಗ್ಯಕರ ಜೀವನ ನಡೆಸಬೇಕು ಎಂದರು.ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್ ಮಾತನಾಡಿ, ಕನಕದಾಸ ಜಯಂತಿಯು ಸಂತ ಹಾಗೂ ಮಹಾಕವಿಯಾದ ಕನಕದಾಸರ ಜನ್ಮ ದಿನವಾಗಿದೆ. ಕನಕದಾಸರು ಕರ್ನಾಟಕದ ಶ್ರೇಷ್ಠ ಸಮಾಜ ಸುಧಾರಕರಲ್ಲಿ ಒಬ್ಬರಾಗಿದ್ದರು. ತಮ್ಮ ಕೀರ್ತನೆ, ಸಂಗೀತಗಳ ಮೂಲಕ ಮನೆಮಾತಾಗಿದ್ದಾರೆ. ಕನಕದಾಸರು ಸಾಮಾಜಿಕ ಪರಿವರ್ತನೆಗೆ ತಮ್ಮ ಕೀರ್ತನೆಗಳ ಮೂಲಕ ಶ್ರಮಿಸಿದರು. ಅವರ ಆದರ್ಶಗಳು ಎಲ್ಲರಿಗೂ ಅನ್ವಯಿಸುತ್ತದೆ. ಜಾತಿ, ಮತ, ಪಥ, ಧರ್ಮ ತೊರೆದು ಪ್ರತಿಯೊಬ್ಬರೂ ಮಾನವ ಪ್ರೀತಿ ಬೆಳೆಸಿಕೊಳ್ಳಬೇಕು ಎಂದರು.ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಜಿಲ್ಲಾ ಲೇಖಕರ ಬಳಗದ ಅಧ್ಯಕ್ಷ ಟಿ.ಜಿ.ಪ್ರೇಮಕುಮಾರ್ ಮಾತನಾಡಿ, ಕನಕದಾಸರು ತಮ್ಮ ಬಾಲ್ಯದಿಂದಲೇ ಅನಿಷ್ಟ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯ ಕಠೋರ ಪರಿಣಾಮಗಳನ್ನು ಅನುಭವಿಸಬೇಕಾಯಿತು. ಅವರು ತಮ್ಮ ಕವಿತೆಗಳ ಮೂಲಕ ಈ ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡಿದರು. ತಮ್ಮ ಕೃತಿಗಳಲ್ಲಿ ಬಾಹ್ಯ ಆಚರಣೆಗಳ ನಿರರ್ಥಕತೆಯನ್ನು ಎತ್ತಿ ತೋರಿಸಿದ ಅವರು, ಜೀವನದಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸಿಕೊಳ್ಳುವ ಅಗತ್ಯತೆಗಳಿಗೆ ವಿಶೇಷ ಮಹತ್ವವನ್ನು ನೀಡಿದರು.

ಕನಕಗುರು ಪೀಠದ ಧರ್ಮದರ್ಶಿ ಎಂ.ನಂಜುಂಡಸ್ವಾಮಿ, ಕನಕದಾಸರ ದಾಸ ಸಾಹಿತ್ಯದ ಮಹತ್ವ ಹಾಗೂ ಕೀರ್ತನೆಗಳ ಕುರಿತು ಮಾತನಾಡಿ, ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಸಮಾಜದಲ್ಲಿನ ಸಮಾನತೆ ಹಾಗೂ ತಾರತಮ್ಯಗಳನ್ನು ತಿದ್ದಲು ಪ್ರಯತ್ನಿಸಿದರು ಎಂದರು.ಸಂಗೊಳ್ಳಿರಾಯಣ್ಣ ಕುರುಬರ ಹಿತರಕ್ಷಣಾ ವೇದಿಕೆಯ ಅಧ್ಯಕ್ಷ ಡಿ.ಆರ್.ಪ್ರಭಾಕರ್ ಮಾತನಾಡಿ, ಎಲ್ಲರೂ ಸಮಾಜದ ಏಳ್ಗೆಗೆ ಶ್ರಮಿಸಬೇಕು ಎಂದರು.ಈ ಸಂದರ್ಭ ಸೋಮವಾರಪೇಟೆ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಆದಂ, ರಾಷ್ಟ್ರೀಯ ಹಬ್ಬಗಳ ಸಮಿತಿ ಅಧ್ಯಕ್ಷ ವಕೀಲ ಹೆಚ್.ಕೆ.ನಾಗೇಶ್, ಸದಸ್ಯ ವಕೀಲ ಜೆಯೇಂದ್ರ, ತಹಶೀಲ್ದಾರ್ ರಮೇಶ್‌ಬಾಬು, ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿ ಅಪ್ಪಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಕೃಷ್ಣಪ್ಪ, ಸೋಮವಾರಪೇಟೆ ಪುರಸಭೆ ಮುಖ್ಯಾಧಿಕಾರಿ ಎಂ.ಪಿ.ಮಹೇಶ್ ಕುಮಾರ್, ಕುಶಾಲನಗರ ಪುರಸಭೆ ಮುಖ್ಯಾಧಿಕಾರಿ ಕೃಷ್ಣಪ್ರಸಾದ್, ಹಿಂದುಳಿದ ವರ್ಗ ಇಲಾಖೆ ಅಧಿಕಾರಿ ಎಚ್.ಎ.ಮೋಹನ್‌ಕುಮಾರ್, ಇತರರು ಪಾಲ್ಗೊಂಡಿದ್ದರು.ನಿತ್ಯ ಸ್ವಾಗತಿಸಿದರು. ಆನಂದ ವಂದಿಸಿದರು. ಮೌನಶ್ರೀ, ನಿತ್ಯಶ್ರೀ ಪ್ರಾರ್ಥಿಸಿದರು. ಇದೇ ಸಂದರ್ಭ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಬಿಸಿಎಂ ಇಲಾಖೆ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.



ಭಾಗಮಂಡಲ ಬ್ರಹ್ಮ ಕಲಷಕ್ ಓರ್ ಕೋಟಿಕ್ ಬೋಡಿಕೆ



@Nadubadenews; ನ.28; ವಿರಾಜಪೇಟೆ ತಲೆಕಾವೇರಿ ಭಾಗಮಂಡಲ ವ್ಯವಸ್ಥಾಪನಾ ಸಮಿತಿರ ಆದನೆಲ್, 2027ನೇ ಮೇ ತಿಂಗತ್ ನಡ್ಪ ಅಷ್ಟಬಂಧ ಬ್ರಹ್ಮಕಲಷೋತ್ಸವ ಆಯಿಮೆಕ್ ಸರ್ಕಾರತಿಂಜ ಓರ್ ಕೋಟಿ ಉರ್ಪಿಯ ಅನುದಾನ ತರೋಂಡೂಂದ್, ಸಮಿತಿರ ಕೊರವುಕಾರ, ಬಾನಂಡ ಪ್ರತ್ಯು ಅಯಿಂಗ, ಮುಖ್ಯ ಮಂತ್ರಿರ ರಾಜಕೀಯ ಕಾರ್ಯಕಾರ ಪಿಂಞ ಶಾಸಕ ಅಜ್ಜಿಕುಟ್ಟಿರ ಪೊನ್ನಣ್ಣ ಅ ಯಿಂಗಕ್ ಬೋಡಿಕೆರ ಕಾಗದತ್‌ನ ಕೊಡ್ತತ್. ಈ ಘಳಿಗೆಲ್ ಕ್ರೀಡಾ ಪ್ರಾಧಿಕಾರತ ಕೂಟ್‌ಕೊರವುಕಾರ ಚೆಪ್ಪುಡಿರ ಅರುಣ್ ಮಾಚಯ್ಯ, ಆಪಟ್ಟಿರ ಟಾಟು ಮೊಣ್ಣಪ್ಪ ಕೂಡ್‌ನನಕೆ ಖನಪಟ್ಟವು ಇಂಜತ್.

ನಡುಬಾಡೆ ಇ-ಪತ್ರಿಕೆ
ASDCA No; SCAB13122025/5632149 JDYAM-KR-18-0022072 ಕೊಡಗಿನ ಪ್ರಥಮ ದ್ವಿಭಾಷ ಸಂಜೆ ಇ-ದೈನಿಕ
ದಿನಾಂಕ: 28/11/26, ಶನಿವಾರ 8951073556 ನಾಳಂಕೆ : ಬಿರ್ಬ್ಯಾರ್ - 13, ಬ್ಯಾಳಾಚೆ
www.nadubadenews.com ಸಂಪಾದಕ:ಚಾಮರ ದಿನೇಶ್‌ಬೆಳ್ಳಪ್ಪ nadubadenews@gmail.com @nadubadenews
ಪುಟ: 2

ನಾಳೆಯ (17 ನವೆಂಬರ್, 2026) ದ್ವಾದಶ ರಾಶಿಗಳ ಭವಿಷ್ಯ

ಮೇಷ
ವೃತ್ತಿಕ್ಷೇತ್ರದಲ್ಲಿ ಹೊಸ ಜವಾಬ್ದಾರಿಗಳು ಹೆಗಲೇರಲಿದ್ದು, ಅವುಗಳನ್ನು ಯಶಸ್ವಿಯಾಗಿ ನಿಭಾಯಿಸುವಿರಿ. ಆರ್ಥಿಕವಾಗಿ ಅನಿರೀಕ್ಷಿತ ಲಾಭದ ಸೂಚನೆಗಳಿವೆ. ಸಂಗಾತಿಯೊಂದಿಗಿನ ಭಿನ್ನಾಭಿಪ್ರಾಯಗಳು ದೂರವಾಗಿ ಮನೆಯಲ್ಲಿ ಶಾಂತಿ ನೆಲೆಸಲಿದೆ.

ವೃಷಭ
ಹಳೆಯ ಹೂಡಿಕೆಗಳಿಂದ ಉತ್ತಮ ಲಾಭ ದೊರೆಯುವ ಸಾಧ್ಯತೆಯಿದೆ. ಕಲೆ ಮತ್ತು ಸೃಜನಶೀಲ ಕ್ಷೇತ್ರದಲ್ಲಿರುವವರಿಗೆ ಹೊಸ ಅವಕಾಶಗಳು ಅರಸಿ ಬರಲಿವೆ. ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸುವುದು ಉತ್ತಮ.

ಮಿಥುನ
ವ್ಯಾಪಾರದಲ್ಲಿ ಹೊಸ ಪಾಲುದಾರಿಕೆಗಳು ರೂಪುಗೊಳ್ಳುವ ಸಾಧ್ಯತೆಯಿದೆ. ನಿಮ್ಮ ದೂರದೃಷ್ಟಿಯ ನಿರ್ಧಾರಗಳು ಭವಿಷ್ಯದಲ್ಲಿ ಉತ್ತಮ ಫಲ ನೀಡಲಿವೆ. ಕುಟುಂಬದ ಹಿರಿಯರ ಆರೋಗ್ಯ ಸುಧಾರಿಸಲಿದೆ.

ಕರ್ಕಾಟಕ
ಮನಸ್ಸಿನಲ್ಲಿ ಸಕಾರಾತ್ಮಕ ಆಲೋಚನೆಗಳು ಮೂಡಲಿದ್ದು, ಹಿಡಿದ ಕೆಲಸಗಳನ್ನು ಉತ್ಸಾಹದಿಂದ ಪೂರ್ಣಗೊಳಿಸುವಿರಿ. ಆಸ್ತಿ ಖರೀದಿ ಅಥವಾ ಮಾರಾಟದ ವಿಚಾರದಲ್ಲಿ ಪ್ರಗತಿ ಕಂಡುಬರಲಿದೆ. ಬಂಧುಗಳ ಆಗಮನದಿಂದ ಮನೆಯಲ್ಲಿ ಸಂತಸದ ವಾತಾವರಣವಿರಲಿದೆ.

ಸಿಂಹ
ಉದ್ಯೋಗದಲ್ಲಿ ಮೇಲಧಿಕಾರಿಗಳ ಪ್ರಶಂಸೆಗೆ ಪಾತ್ರರಾಗುವಿರಿ. ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದರಿಂದ ಗೌರವ ಹೆಚ್ಚಾಗಲಿದೆ. ಖರ್ಚು-ವೆಚ್ಚಗಳ ಮೇಲೆ ನಿಯಂತ್ರಣವಿರಲಿ.

ಕನ್ಯಾ
ದೀರ್ಘಕಾಲದಿಂದ ಬಾಕಿ ಉಳಿದಿದ್ದ ಕೆಲಸಗಳು ಇಂದು ಸುಗಮವಾಗಿ ಪೂರ್ಣಗೊಳ್ಳಲಿವೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಏಕಾಗ್ರತೆ ಹೆಚ್ಚಾಗಲಿದೆ. ಪ್ರಯಾಣದಿಂದ ಲಾಭದಾಯಕ ಫಲಿತಾಂಶ ನಿರೀಕ್ಷಿಸಬಹುದು.

ತುಲಾ
ಕೌಟುಂಬಿಕ ವಿಚಾರಗಳಲ್ಲಿ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಬಹುದು. ಹಣಕಾಸಿನ ವ್ಯವಹಾರಗಳಲ್ಲಿ ಎಚ್ಚರಿಕೆ ಅಗತ್ಯ; ಯಾರಿಗೂ ಸಾಲ ನೀಡುವ ಮುನ್ನ ಯೋಚಿಸಿ. ಸಂಗಾತಿಯ ಸಲಹೆಗಳು ನಿಮಗೆ ನೆರವಾಗಲಿವೆ.

ವೃಶ್ಚಿಕ
ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವ ದಿನವಿದು. ವ್ಯಾಪಾರ-ವ್ಯವಹಾರಗಳಲ್ಲಿ ವಿಸ್ತರಣೆಯ ಯೋಜನೆಗಳು ಫಲ ನೀಡಲಿವೆ. ದೈಹಿಕ ಮತ್ತು ಮಾನಸಿಕ ಆರೋಗ್ಯ ಉತ್ತಮವಾಗಿರಲಿದೆ.

ಧನು
ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚಾಗಲಿದ್ದು, ಪುಣ್ಯಕ್ಷೇತ್ರಗಳಿಗೆ ಭೇಟಿ ನೀಡುವ ಯೋಗವಿದೆ. ಉದ್ಯೋಗ ಬದಲಾವಣೆಗೆ ಪ್ರಯತ್ನಿಸುತ್ತಿರುವವರಿಗೆ ಶುಭ ಸುದ್ದಿ ಸಿಗಲಿದೆ. ಮಕ್ಕಳ ಪ್ರಗತಿಯಿಂದ ಮನಸ್ಸಿಗೆ ನೆಮ್ಮದಿ ದೊರೆಯಲಿದೆ.

ಮಕರ
ವೃತ್ತಿಜೀವನದಲ್ಲಿ ಹೊಸ ಸವಾಲುಗಳು ಎದುರಾದರೂ ನಿಮ್ಮ ಬುದ್ಧಿವಂತಿಕೆಯಿಂದ ಅವುಗಳನ್ನು ಜಯಿಸುವಿರಿ. ಭೂಮಿ ಅಥವಾ ವಾಹನ ಖರೀದಿಯ ಯೋಗವಿದೆ. ಸ್ನೇಹಿತರ ಸಹಕಾರದಿಂದ ಪ್ರಮುಖ ಕಾರ್ಯವೊಂದು ಸಿದ್ಧಿಸಲಿದೆ.

ಕುಂಭ
ಆದಾಯದ ಹೊಸ ಮೂಲಗಳು ತೆರೆದುಕೊಳ್ಳಲಿದ್ದು, ಆರ್ಥಿಕ ಸ್ಥಿತಿ ಬಲಗೊಳ್ಳಲಿದೆ. ಸಮಾಜದಲ್ಲಿ ಪ್ರತಿಷ್ಠೆ ಹೆಚ್ಚಾಗಲಿದೆ. ಕೋಪವನ್ನು ನಿಯಂತ್ರಿಸಿಕೊಳ್ಳುವುದರಿಂದ ಅನಗತ್ಯ ವಿವಾದಗಳಿಂದ ದೂರವಿರಬಹುದು.

ಮೀನ
ಸೃಜನಶೀಲ ಕೆಲಸಗಳಲ್ಲಿ ಯಶಸ್ಸು ಸಿಗಲಿದೆ. ಹಳೆಯ ಗೆಳೆಯರ ಭೇಟಿಯಿಂದ ಮನಸ್ಸಿಗೆ ಉಲ್ಲಾಸ ದೊರೆಯಲಿದೆ. ಆರೋಗ್ಯದಲ್ಲಿ ಸಣ್ಣಪುಟ್ಟ ಏರುಪೇರುಗಳಾಗುವ ಸಾಧ್ಯತೆಯಿರುವುದರಿಂದ ಆಹಾರ ಕ್ರಮದ ಬಗ್ಗೆ ಗಮನವಿರಲಿ.

(ಗಮನಿಸಿ: ರಾಶಿ ಭವಿಷ್ಯವು ಸಾಮಾನ್ಯ ಗ್ರಹಚಾರವನ್ನು ಆಧರಿಸಿದ್ದು, ವೈಯಕ್ತಿಕ ಜಾತಕಕ್ಕೆ ಅನುಗುಣವಾಗಿ ಸ್ವಲ್ಪ ಬದಲಾವಣೆಗಳಿರಬಹುದು.)

ಮಡಿಕೇರಿ–ದೋಣಿಗಲ್ಲು ಮಾರ್ಗದ ರಾಜ್ಯ ಹೆದ್ದಾರಿ ನಿರ್ಮಾಣಕ್ಕೆ ಶೀಘ್ರ ಚಾಲನೆ : ಡಾ. ಮಂಥರ್ ಗೌಡ



@Nadubadenews; ನ.28;

ಮಡಿಕೇರಿ: ಮಡಿಕೇರಿ–ದೋಣಿಗಲ್ಲು ಮಾರ್ಗದ ರಾಜ್ಯ ಹೆದ್ದಾರಿ ನಿರ್ಮಾಣಕ್ಕೆ ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರೆತಿದೆ ಎಂದು ಶಾಸಕ ಡಾ. ಮಂತರ್ ಗೌಡ ತಿಳಿಸಿದರು. ನಗರದ ಹೊರವಲಯದ ಕರ್ಣಂಗೇರಿ ಗ್ರಾಮದ ಚಂದ್ರಗಿರಿ ಸಮುದಾಯ ಭವನದಲ್ಲಿ ಶನಿವಾರ ನಡೆದ ಹೋಬಳಿ ಮಟ್ಟದ ಪ್ರಜಾಸೇವಾ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಮಡಿಕೇರಿ, ಮಾದಾಪುರ, ಸೋಮವಾರಪೇಟೆ, ಶನಿವಾರಸಂತೆ ಹಾಗೂ ದೋಣಿಗಲ್ಲು ಮಾರ್ಗದಲ್ಲಿ ಸುಮಾರು 96 ಕಿ.ಮೀ. ಉದ್ದದ ರಸ್ತೆ ನಿರ್ಮಾಣವಾಗಲಿದ್ದು, ಈ ಹೆದ್ದಾರಿ ವ್ಯಾಪ್ತಿಯಲ್ಲಿ 15 ಗ್ರಾಮ ಪಂಚಾಯಿತಿಗಳು ಬರಲಿವೆ. ಸುಮಾರು 60 ಅಡಿ ಅಗಲದಲ್ಲಿ ರಸ್ತೆ ಅಭಿವೃದ್ಧಿಪಡಿಸಲಾಗುವುದು ಎಂದು ವಿವರಿಸಿದರು. ಈ ಯೋಜನೆಗೆ ಸುಮಾರು 1,300 ಕೋಟಿ ರೂ. ವೆಚ್ಚವಾಗಲಿದ್ದು, ಕೊಡಗು ಜಿಲ್ಲೆಯ ಇತಿಹಾಸದಲ್ಲೇ ಇದೊಂದು ಮಹತ್ವದ ಅಭಿವೃದ್ಧಿ ಯೋಜನೆಯಾಗಿದೆ ಎಂದು ಹೇಳಿದರು. ರಾಜ್ಯ ಸರ್ಕಾರ ಜಾರಿಗೊಳಿಸಿರುವ ಪ್ರಜಾಸೇವಾ ಅಭಿಯಾನಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಶನಿವಾರ ಎರಡು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅಭಿಯಾನ ಆಯೋಜಿಸಲು ಚಿಂತಿಸಲಾಗಿದೆ. ಅಧಿಕಾರಿಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದು ಸೂಚಿಸಿದರು. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸಾರ್ವಜನಿಕರ ಹಿತಾಸಕ್ತಿಯನ್ನು ಅರಿತು, ನಿಯಮಾನುಸಾರ ಕರ್ತವ್ಯ ನಿರ್ವಹಿಸಬೇಕು. ರಜೆ ದಿನಗಳಲ್ಲಿಯೂ ಕುಟುಂಬದೊಂದಿಗೆ ಸಮಯ ಕಳೆಯುವಂತೆ ಸಾರ್ವಜನಿಕರ ಕೆಲಸಗಳಿಗೂ ಆದ್ಯತೆ ನೀಡುವುದು ಅಗತ್ಯ ಎಂದು ಹೇಳಿದರು. ಗ್ರಾಮೀಣ ಭಾಗದ ಜನರ ಸಮಸ್ಯೆ ಹಾಗೂ ಅಹವಾಲುಗಳನ್ನು ಆಲಿಸಲು ಪ್ರಜಾಸೇವಾ ಅಭಿಯಾನ ಸಹಕಾರಿಯಾಗಿದೆ. ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವುದು ಅತ್ಯಗತ್ಯ ಎಂದರು. ಈ ಬಾರಿ ಮಳೆಯ ಪ್ರಮಾಣ ಕಡಿಮೆಯಾಗಿದ್ದು, ಬರ ಘೋಷಣೆಯಾಗಿದೆ. ಈ ಹಿನ್ನೆಲೆಯಲ್ಲಿ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಪೂರೈಕೆ ಸೇರಿದಂತೆ ಸಾರ್ವಜನಿಕರ ಅಗತ್ಯ ಕೆಲಸಗಳಿಗೆ ಅಧಿಕಾರಿಗಳು ಆದ್ಯತೆ ನೀಡಬೇಕು ಎಂದು ತಾಕೀತು ಮಾಡಿದರು. ಜನರಿಗೆ ಸುಳ್ಳು ಆಶ್ವಾಸನೆಗಳನ್ನು ನೀಡದೆ, ಅವರ ವಿವಿಧ ಬೇಡಿಕೆಗಳನ್ನು ಕಾನೂನುಬದ್ಧವಾಗಿ ಈಡೇರಿಸಲು ಕ್ರಮ ಕೈಗೊಳ್ಳಬೇಕು ಎಂದು ಪ್ರತಿಪಾದಿಸಿದರು.

ಕರ್ಣಂಗೇರಿಯಲ್ಲಿ ನಡೆದ ಪ್ರಜಾಸೇವಾ ಅಭಿಯಾನದಲ್ಲಿ 120ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾದವು. ಕಂದಾಯ, ಆಹಾರ, ಲೋಕೋಪಯೋಗಿ, ಪಂಚಾಯತ್ ರಾಜ್ ಹಾಗೂ ವಿದ್ಯುತ್ ಸೇರಿದಂತೆ ವಿವಿಧ ಇಲಾಖೆಗಳ ಸಂಬಂಧ ಹೆಚ್ಚಿನ ಅರ್ಜಿಗಳು ಸಲ್ಲಿಕೆಯಾಗಿದ್ದು, ಹಲವು ಅರ್ಜಿಗಳಿಗೆ ಶಾಸಕರು ಸ್ಥಳದಲ್ಲಿಯೇ ಪರಿಹಾರ ಒದಗಿಸಿದರು. ಬಳಿಕ ಹಲವು ಕುಟುಂಬಗಳಿಗೆ ಜಾಗದ ಹಕ್ಕುಪತ್ರ ವಿತರಿಸಿದರು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷ ಮಂದ್ರೀರ ಮೋಹನ್ ದಾಸ್, ಪ್ರಮುಖರಾದ ಜಾನ್ಸನ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೆಂಥಿಲ್ ಕುಮಾರ್, ತಹಶೀಲ್ದಾರ್ ಶ್ರೀಧರ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಘತ ಕಾಲದಲ್ಲಿ ಈ ದಿನ... 28 ನವೆಂಬರ್ 2026



ಸಂಗ್ರಹ;
ಕರಿನೆರವಂಡ ಡ್ಯಾನಿ ಕುಶಾಲಪ್ಪ

⭐ *ಮಹಾತ್ಮ ಜ್ಯೋತಿರಾವ್ ಫುಲೆ ಪುಣ್ಯತಿಥಿ (1890).* ಭಾರತದ ಪ್ರಮುಖ ಸಮಾಜ ಸುಧಾರಕ, ಶಿಕ್ಷಣ ತಜ್ಞ ಹಾಗೂ 'ಸತ್ಯಶೋಧಕ ಸಮಾಜ'ದ ಸಂಸ್ಥಾಪಕರಾದ ಜ್ಯೋತಿರಾವ್ ಫುಲೆ ಅವರು ಪುಣೆಯಲ್ಲಿ ನಿಧನರಾದರು.

⭐ *ಸೇನಾಪತಿ ಬಾಪಟ್ ನಿಧನ (1967).* ಸ್ವಾತಂತ್ರ್ಯ ಹೋರಾಟಗಾರ ಮತ್ತು ಸಮಾಜ ಸುಧಾರಕ ಪಾಂಡುರಂಗ ಮಹಾದೇವ ಬಾಪಟ್ ('ಸೇನಾಪತಿ ಬಾಪಟ್') ಅವರು ನಿಧನರಾದರು.

⭐ *ಮೇಜರ್ ಸಂದೀಪ್ ಉನ್ನಿಕೃಷ್ಣನ್ ಹತಾತ್ಮ (2008).* ಮುಂಬೈ ಭಯೋತ್ಪಾದಕ ದಾಳಿಯ ವೇಳೆ ತಾಜ್ ಮಹಲ್ ಪ್ಯಾಲೇಸ್ ಹೋಟೆಲ್‌ನಲ್ಲಿ ಒತ್ತೆಯಾಳುಗಳನ್ನು ರಕ್ಷಿಸುವ ಕಾರ್ಯಾಚರಣೆಯಲ್ಲಿ ಎನ್‌ಎಸ್‌ಜಿ (NSG) ಕಮಾಂಡೋ ಮೇಜರ್ ಸಂದೀಪ್ ಉನ್ನಿಕೃಷ್ಣನ್ ವೀರಮರಣವನ್ನಪ್ಪಿದರು. ಅವರಿಗೆ ಮರಣೋತ್ತರವಾಗಿ 'ಅಶೋಕ ಚಕ್ರ' ನೀಡಿ ಗೌರವಿಸಲಾಯಿತು.

⭐*ರಾಜಕೀಯ ಬೆಳವಣಿಗೆಗಳು (1997).* ಪ್ರಧಾನಿ ಐ.ಕೆ. ಗುಜ್ರಾಲ್ ನೇತೃತ್ವದ ಯುನೈಟೆಡ್ ಫ್ರಂಟ್ ಸರ್ಕಾರವು ಪತನಗೊಂಡಿತು

⭐ಟೆಹ್ರಾನ್ ಸಮ್ಮೇಳನ ಆರಂಭ (1943).* ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಅಮೆರಿಕ ಅಧ್ಯಕ್ಷ ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್, ಬ್ರಿಟಿಷ್ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ ಮತ್ತು ಸೋವಿಯತ್ ನಾಯಕ ಜೋಸೆಫ್ ಸ್ಟಾಲಿನ್ ಅವರ ನಡುವಿನ ಮಹತ್ವದ ಟೆಹ್ರಾನ್ ಸಮ್ಮೇಳನ ಪ್ರಾರಂಭವಾಯಿತು

⭐ *ಇರಾನ್ ನೌಕಾಪಡೆ ದಿನ (1980).* ಇರಾನ್-ಇರಾಕ್ ಯುದ್ಧದ ಸಮಯದಲ್ಲಿ ಇರಾನ್ ನೌಕಾಪಡೆಯು ಪರ್ಷಿಯನ್ ಕೊಲ್ಲಿಯಲ್ಲಿ ಇರಾಕಿನ ನೌಕಾಪಡೆಗೆ ಭಾರಿ ನಷ್ಟ ಉಂಟುಮಾಡಿತು; ಇದರ ಸ್ಮರಣಾರ್ಥ ಇರಾನ್ ಈ ದಿನವನ್ನು ನೌಕಾಪಡೆಯ ದಿನವಾಗಿ ಆಚರಿಸುತ್ತದೆ.

⭐ *ಬ್ರಿಟನ್ ಪ್ರಧಾನಿ ರಾಜೀನಾಮೆ (1990).* ಮಾರ್ಗರೆಟ್ ಥ್ಯಾಚರ್ ಅವರು ಯುನೈಟೆಡ್ ಕಿಂಗ್‌ಡಂನ ಪ್ರಧಾನ ಮಂತ್ರಿ ಹುದ್ದೆಗೆ ಅಧಿಕೃತವಾಗಿ ರಾಜೀನಾಮೆ ನೀಡಿದರು, ನಂತರ ಜಾನ್ ಮೇಜರ್ ಪ್ರಧಾನಿಯಾದರು

⭐ *ಹರ್ಭಜನ್ ಸಿಂಗ್ ಮಾರಕ ಬೌಲಿಂಗ್ (2004).* ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಆರಂಭವಾದ ಎರಡನೇ ಟೆಸ್ಟ್ ಪಂದ್ಯದಲ್ಲಿ ಹರ್ಭಜನ್ ಸಿಂಗ್ 7 ವಿಕೆಟ್ ಪಡೆದು ಭಾರತಕ್ಕೆ 8 ವಿಕೆಟ್‌ಗಳ ಸ್ಮರಣೀಯ ಜಯ ಹಾಗೂ ಸರಣಿ ಗೆಲುವು ತಂದುಕೊಟ್ಟರು.

⭐ *ವಿಶ್ವ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಗುಕೇಶ್ ಸಮಬಲ (2024).* ವಿಶ್ವ ಚೆಸ್ ಚಾಂಪಿಯನ್‌ಶಿಪ್‌ನ 3ನೇ ಸುತ್ತಿನಲ್ಲಿ ಡಿಂಗ್ ಲಿರೆನ್ ವಿರುದ್ಧ ಭರ್ಜರಿ ಜಯ ಸಾಧಿಸಿದ ಭಾರತದ ಡಿ. ಗುಕೇಶ್ ಅಂಕಗಳನ್ನು ಸಮಬಲಗೊಳಿಸಿದರು.

ರಾಷ್ಟ್ರೀಯ ಹಾಕಿಗೆ ಅರಮಣಮಾಡ ಕಶೀಶ್ ಸೂರಜ್ ಆಯ್ಕೆ



@nadubadenews; ನ.28 ಪೊನ್ನಂಪೇಟೆ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ವಸತಿ ನಿಲಯದ ವಿದ್ಯಾರ್ಥಿನಿ ಅರಮಣಮಾಡ ಕಶೀಶ್ ಸೂರಜ್ ರಾಷ್ಟ್ರಮಟ್ಟದ ಹಾಕಿ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ. ಇವರು ಬೆಸಗೂರು ಗ್ರಾಮದ ನಿವಾಸಿ ಅರಮಣಮಾಡ ಶಿಬಿನ್ ಸೂರಜ್ ಹಾಗೂ ರೋಷ್ನಿ ದಂಪತಿಯ ಪುತ್ರಿ. ಪೊನ್ನಂಪೇಟೆ ಕ್ರೀಡಾ ವಸತಿ ನಿಲಯದಲ್ಲಿ ತರಬೇತಿ ಪಡೆಯುತ್ತಿರುವ ಕಶೀಶ್, ತಮ್ಮ ಅತ್ಯುತ್ತಮ ಕ್ರೀಡಾ ಪ್ರದರ್ಶನದ ಮೂಲಕ ರಾಷ್ಟ್ರಮಟ್ಟದ ತಂಡದಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ನಡೆಯಲಿರುವ ರಾಷ್ಟ್ರೀಯ ಹಾಕಿ ಪಂದ್ಯಾವಳಿಯಲ್ಲಿ ಇವರು ಪಾಲ್ಗೊಳ್ಳಲಿದ್ದಾರೆ.

ಗೋಣಿಕೊಪ್ಪದಲ್ಲಿ ನಡೆದ ಗ್ರೀಸ್‌ಕಂಬ ಹತ್ತುವ ಸ್ಪರ್ಧೆ...

@nadubadenews; ನ.28; ಗೋಣಿಕೊಪ್ಪ: ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಗೋಣಿಕೊಪ್ಪ ಆಟೋ ಚಾಲಕರ ಹಾಗೂ ಮಾಲೀಕರ ಸಂಘದ ವತಿಯಿಂದ 21ನೇ ವರ್ಷದ ಗ್ರೀಸ್ ಕಂಬ ಹತ್ತುವ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಸ್ವಾತಂತ್ರ್ಯ ಹೋರಾಟಗಾರ ಕೊಳ್ಳಿಮಾಡ ಕರುಂಬಯ್ಯ ಬಸ್ ನಿಲ್ದಾಣದಲ್ಲಿ ನಡೆದ ಸ್ಪರ್ಧೆಗೆ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಎಂ.ಪಿ. ಕೇಶವ ಕಾಮತ್ ಚಾಲನೆ ನೀಡಿದರು. ಸ್ಪರ್ಧೆಯಲ್ಲಿ 15ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿ ತಮ್ಮ ಸಾಹಸ ಪ್ರದರ್ಶಿಸಿದರು. ರಾಜ್ಯೋತ್ಸವದ ಅಂಗವಾಗಿ ಆಟೋ ನಿಲ್ದಾಣದಲ್ಲಿ ಅನ್ನದಾನ ಕಾರ್ಯಕ್ರಮವನ್ನೂ ಆಯೋಜಿಸಲಾಗಿತ್ತು. ಆಟೋ ಚಾಲಕರು ಹಾಗೂ ಮಾಲೀಕರ ಸಂಘದ ಗೌರವ ಅಧ್ಯಕ್ಷ ಕುಲ್ಲಚಂಡ ಬೋಪಣ್ಣ ಧ್ವಜಾರೋಹಣ ನೆರವೇರಿಸಿದರು. ಚಂದನ್ ಕಾಮತ್ ಸೇರಿದಂತೆ ಸಂಘದ ಅಧ್ಯಕ್ಷ ಹಲ್ಚಿರ ಜಿಮ್ಮ ಸುಬ್ಬಯ್ಯ, ಕಾರ್ಯದರ್ಶಿ ಹೇಮಂತ್ ಕೈಕೇರಿ, ಖಜಾಂಚಿ ಪಿ.ಪಿ. ರಂಜು, ಸಹಕಾರ್ಯದರ್ಶಿ ಹೆಚ್.ಎಂ. ಪೂಣಚ್ಚ, ನಿರ್ದೇಶಕರಾದ ಬಿ.ಎಸ್. ದಿನೇಶ್, ರಕ್ಷಿತ್ ಬೋಪಣ್ಣ, ಹೆಚ್.ಈ ರಾಜು, ಚಂದ್ರಬಾನು, ಸತೀಶ್, ಚಂದ್ರ. ಪಿ.ಆರ್, ರಮೇಶ್, ಎ.ಕೆ. ಕಿರಣ್‌ಕುಮಾರ್, ಶಂಕರ್, ಹೆಚ್.ಡಿ. ಮಹಾದೇವ, ಮಾಜಿ ಉಪಾಧ್ಯಕ್ಷ ವಿ.ಸಿ. ಪ್ರದೀಪ್, ಮಾಜಿ ಕಾರ್ಯದರ್ಶಿ ಕೆ.ವಿ. ಸುರೇಶ್, ವಸಂತ ಸೇರಿದಂತೆ ಆಟೋ ಚಾಲಕರು, ಮಾಲೀಕರು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಉದ್ಯೋಗ ಮಾಹಿತಿ...

ಕರ್ನಾಟಕ ಅರಣ್ಯ ಇಲಾಖೆ (KFD - ಬೀಟ್ ಫಾರೆಸ್ಟರ್ / ಅರಣ್ಯ ರಕ್ಷಕ ನೇಮಕಾತಿ 2026)

- **ಹುದ್ದೆಗಳ ವಿವರ: ಬೀಟ್ ಫಾರೆಸ್ಟರ್ (Beat Forester / Forest Guard) ಹುದ್ದೆಗಳು.**
- **ಖಾಲಿ ಹುದ್ದೆಗಳು: ಒಟ್ಟು 450 ಹುದ್ದೆಗಳು (355 ಉಳಿಕೆ ಮೂಲ ವೃಂದ ಹಾಗೂ 95 ಕಲ್ಯಾಣ ಕರ್ನಾಟಕ ವಲಯ).**
- **ವಿದ್ಯಾರ್ಹತೆ: 2ನೇ ಪಿಯುಸಿ (PUC / 12ನೇ ತರಗತಿ) ಅಥವಾ ತತ್ಸಮಾನ ವಿದ್ಯಾರ್ಹತೆ.**
- **ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ರೂ. 37,500 ರಿಂದ ರೂ. 76,100 ರವರೆಗೆ.**
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22 ಡಿಸೆಂಬರ್ 2026 (ಶುಲ್ಕ ಪಾವತಿಗೆ 23 ಡಿಸೆಂಬರ್ 2026).**
- **ಅಧಿಕೃತ ವೆಬ್‌ಸೈಟ್:** https://cetonline.karnataka.gov.in/kea/

ರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ (KSFES - ಅಗ್ನಿಶಾಮಕ ನೇಮಕಾತಿ 2026)

- ಹುದ್ದೆಗಳ ವಿವರ: ಅಗ್ನಿಶಾಮಕ (Fire Fighter) ಹುದ್ದೆಗಳು.
- ಖಾಲಿ ಹುದ್ದೆಗಳು: ಒಟ್ಟು 460 ಹುದ್ದೆಗಳು.
- ವಿದ್ಯಾರ್ಹತೆ: ಎಸ್‌ಎಸ್‌ಎಲ್‌ಸಿ (SSLC / 10ನೇ ತರಗತಿ) ಅಥವಾ ತತ್ಸಮಾನ ವಿದ್ಯಾರ್ಹತೆ.
- ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ರೂ. 37,500 ರಿಂದ ರೂ. 76,100 ರವರೆಗೆ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22 ಡಿಸೆಂಬರ್ 2026 (ಶುಲ್ಕ ಪಾವತಿಗೆ 23 ಡಿಸೆಂಬರ್ 2026).
- ಅಧಿಕೃತ ವೆಬ್‌ಸೈಟ್: https://cetonline.karnataka.gov.in/kea/

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA - ಸಹಾಯಕ ಸರ್ಕಾರಿ ಅಭಿಯೋಜಕರ ನೇಮಕಾತಿ 2026) ಹುದ್ದೆಗಳ ವಿವರ: ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಸಹಾಯಕ ಸರ್ಕಾರಿ ವಕೀಲರು (Assistant Public Prosecutor-cum-Assistant Government Pleader - Group B).

- ಖಾಲಿ ಹುದ್ದೆಗಳು: ಒಟ್ಟು 320 ಹುದ್ದೆಗಳು (268 ಉಳಿಕೆ ಮೂಲ ವೃಂದ ಹಾಗೂ 52 ಕಲ್ಯಾಣ ಕರ್ನಾಟಕ ವಲಯ).
- ವಿದ್ಯಾರ್ಹತೆ: ಕಾನೂನು ಪದವಿ (LLB) ಮತ್ತು ಕನಿಷ್ಠ 3 ವರ್ಷಗಳ ವಕೀಲ ವೃತ್ತಿಯ ಅನುಭವ.
- ಸಂಬಳ: ಸರ್ಕಾರದ ವೇತನ ಶ್ರೇಣಿಯಂತೆ ರೂ. 69,250 ರಿಂದ ರೂ. 1,34,200 ರವರೆಗೆ.
- ಅರ್ಜಿ ಸಲ್ಲಿಸಲು ಕೊ